

# ಭಾವುಕ ದಾರಿಗೆ ಭಯಾನಕ ತಿರುವು!

ಒಂದು ಭಾವನಾತ್ಮಕ ಕಥೆಯಂತೆ ಶುರುವಾಗುವ ಈ ಕಿರುಚಿತ್ರ ನಂತರ ಹಾರರ್ ಜಾನರ್‌ಗೆ ಹೊರಳಿಕೊಳ್ಳುತ್ತದೆ. ಎರಡೂ ಜಾನರ್‌ಗಳನ್ನು ಕಸಿ ಮಾಡಿರುವ ರೀತಿ ಮತ್ತು ತಾಂತ್ರಿಕ ಗಟ್ಟಿತನದ ಕಾರಣಕ್ಕೆ ಗಮನಸೆಳೆಯುವ ಕಿರುಚಿತ್ರವಿದು.

■ ಗೌರಿ

ಅವನು ಆ ಅಪಾರ್ಟ್‌ಮೆಂಟ್‌ನ ಆಯಾಳೊಬ್ಬಳ ಮಗ. ಅಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುವಾಗ ಅವನು ಸುತ್ತಲಿನ ಜಾಗದಲ್ಲಿ ಆಡಿಕೊಂಡು ಇರುತ್ತಾನೆ. ಬಗೆಬಗೆಯಲ್ಲಿ ಎಲ್ಲರನ್ನೂ ಹೆದರಿಸುವುದು ಅವನಿಗೆ ಖುಷಿ ಕೊಡುವ ಆಟ. ಮರದ ಮೇಲಿನ ಗೋಸುಂಬೆಯನ್ನು ಹೆದರಿಸಿ ಓಡಿಸಿದಷ್ಟೇ ಖುಷಿ ಅವನಿಗೆ ಕಾರಿನಿಂದ ಇಳಿಯುವ ತರುಣನನ್ನು ಹೆದರಿಸುವಾಗಲೂ ಸಿಗುತ್ತದೆ.

ಆ ಅಪಾರ್ಟ್‌ಮೆಂಟಿನಲ್ಲಿ ಇರುವ ಆ ತರುಣ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾನೆ. ಸರ್ವೇಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿಯೂ ಇರುವ ಹಾಗೆ ಸಣ್ಣ ಮೀನುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಂಡು ತನಗಿಂತ ದೊಡ್ಡ ಮೀನಿನ ಹಸಿವೆಗೆ ಬಲಿಯಾಗುವ ಕೆಲಸದ ಚಕ್ರವೇ ಅವನದ್ದು. ಪ್ರಾಜೆಕ್ಟಿನ ವಿವರಗಳಿಗಾಗಿ ತನ್ನ ಕೆಳಗಿನ ಸಹೋದ್ಯೋಗಿಗಳ ಜೊತೆಗೆ ಕಿರುಚಾಡಿ ಬೈದಾಡುವ ಅವನು, ತನ್ನ ಮೇಲಿನ ಅಧಿಕಾರಿಗಳ ಜೊತೆಗೆ ನಯವಾಗಿ, ದೈನ್ಯವಾಗಿ ಮಾತಾಡುತ್ತಾನೆ.

ಯಾವಾಗಲೂ ತಾನು ಹೆದರಿಸುವವರು ಮತ್ತು ತನ್ನನ್ನು ಹೆದರಿಸುವವರ ನಡುವೆ ಸಿಲುಕಿ ತೊಳಲಾಡುತ್ತಿರುವ ಆ ತರುಣನಿಗೆ ಈ ಆಯಾಳ ಮಗ ಹೇಗೋ ಇಷ್ಟವಾಗಿಬಿಡುತ್ತಾನೆ. ಇಷ್ಟ ಎಂದರೆ ಅವನ ಜೊತೆಯಲ್ಲಿ ಎಂದೂ ಅಕ್ಕರೆಯಿಂದ ಮಾತಾಡಿದ್ದಿಲ್ಲ, ಎತ್ತಿ ಮುದ್ದಾಡಿದ್ದಿಲ್ಲ. ಆದರೆ ಅವನು ಗುಂಡು ಹೊಡೆದ ಹಾಗೆ ನಟನೆ ಮಾಡಿದಾಗ ಗುಂಡು ತಗುಲಿದವನ ಹಾಗೆ ನಟಿಸುತ್ತಾನೆ. ಅದು ಆ ಹುಡುಗನಿಗೆ ಖುಷಿ ಕೊಡುತ್ತದೆ. 'ಹೆದ್ರಿದೆ ಅಲ್ವಾ?' ಎಂದು ಖುಷಿಯಿಂದ ಕೇಳುತ್ತಾನೆ. ಆದರೆ ಅವನು ನಸುನಕ್ಕು ತನ್ನ ಅಪಾರ್ಟ್‌ಮೆಂಟಿನ ಒಳಗೆ ಹೋಗುತ್ತಾನೆ. ಅವನ ನಗು ನೋಡಿ ಹುಡುಗನಿಗೆ ನಿರಾಸೆ. ಅವನು ಮತ್ತೊಂದು ವೇಷದ ಜೊತೆಗೆ ಮರುದಿನ ಮತ್ತೆ ಭಯಪಡಿಸಲು ಬರುತ್ತಾನೆ. ಆದರೆ ಕೆಲಸದ ಒತ್ತಡದಲ್ಲಿದ್ದ ತರುಣ ಆ ಹುಡುಗನ ಕೈಯಲ್ಲಿದ್ದ ಬಿಲ್ಲು ಬಾಣಗಳನ್ನು ಮುರಿದು ಹಾಕಿ ಹೋಗುತ್ತಾನೆ.



**ಹೆಸರು:** ಚಸ್ಕಾ
**ನಿರ್ದೇಶನ/ನಿರ್ಮಾಣ:** ಗಗನ್ ಮೆಶ್ರಾಮ್
**ಛಾಯಾಗ್ರಹಣ:** ದೀಪಾಂಶು ಹಾಲ್ದಾರ್
**ಸಂಕಲನ:** ಅರ್ಚಿತ್ ರಸ್ತೋಗಿ
**ತಾರಾಗಣ:** ನಿಖಿಲ್, ರಾಹುಲ್, ನಿಧಿ
**ಸಂಭಾಷಣೆ/ಚಿತ್ರಕಥೆ:** ಮನೀಷ್ ಸಿಂಗ್
**ಸಂಗೀತ:** ವಿಶಾಲ್ ಭಾರತ್

ಅದಾದ ಮರುದಿನ ಹುಡುಗನ ಪತ್ತೆಯಿಲ್ಲ. ನೋಡಿದರೆ ಅವನು ಅಮ್ಮನೊಡನೆ ಊರಿಗೆ ಹೋಗಿದ್ದಾನೆ ಎಂಬ ಮಾಹಿತಿ ಸಿಗುತ್ತದೆ.

ಇಲ್ಲಿಯವರೆಗೆ ಒಂದು ಭಾವನಾತ್ಮಕ ಕಥನ ಎನಿಸುವ ಕಿರುಚಿತ್ರ 'ಚಸ್ಕಾ'. ಇಲ್ಲಿಂದ ಮುಂದೆ ಹಾರರ್ ಪ್ರಕಾರಕ್ಕೆ ಹೊರಳಿಕೊಳ್ಳುತ್ತದೆ.

ದೆವ್ವದ ಕತೆಗಳ ಬೆನ್ನೆಲುಬಾಗುವುದು ಸಾಮಾನ್ಯವಾಗಿ ಹಿಂದಿನ ಜನ್ಮ ಅಥವಾ ಆಸೆಗಳು ಪೂರ್ಣಗೊಳ್ಳದೆ ಅತೃಪ್ತವಾಗಿ ತೀರಿಕೊಂಡವರ ಆತ್ಮಗಳು. ಇಲ್ಲಿಯೂ ಅಂಥದ್ದೇ ಒಂದು ಎಳೆ ಇರುವುದಾದರೂ ಅದನ್ನು ಬೇರೆ ಹಲವು ಎಳೆಗಳೊಂದಿಗೆ ಹೆಣೆದಿರುವ ನಿರ್ದೇಶಕರು ದೆವ್ವದ ಕತೆಗಳ ಜೊತೆಗೆ ಜೀವಂತ ದೆವ್ವಗಳ ಕುರಿತೂ ಮಾತಾಡುತ್ತಾರೆ. ಪುಟ್ಟ ಹುಡುಗನ ಹೆದರಿಸುವ ಆಟದ ಮೂಲಕವೇ, ಒಬ್ಬರನ್ನು ಹೆದರಿಸಿಯೇ ಇನ್ನೊಬ್ಬರು ಬದುಕುತ್ತಿರುವ, ಒಬ್ಬರನ್ನು ತುಳಿದೇ ಇನ್ನೊಬ್ಬರು ಮೇಲೇರುತ್ತಿರುವ ದೊಡ್ಡವರ ಜಗತ್ತಿನ ವಿಕೃತಿಗಳನ್ನೂ ಈ ಕಿರುಚಿತ್ರ ತುಂಬ ಸೂಕ್ಷ್ಮವಾಗಿ ತೋರಿಸುತ್ತದೆ. ಹಾಗಾಗಿ ಕೊನೆಯಲ್ಲಿ ಬರುವ ಹಾರರ್ ಅಂಶಗಳು ನಮ್ಮನ್ನು ಬೆಚ್ಚಿಸುವಷ್ಟೇ ಮೊದಲರ್ಧದ ತಳಮಳಗಳೂ ಕಾಡುತ್ತವೆ.

ತಾಂತ್ರಿಕವಾಗಿಯೂ ಈ ಚಿತ್ರ ತುಂಬ ಗಟ್ಟಿಯಾಗಿದೆ. ಮಬ್ಬುಬೆಳಕಿನಲ್ಲಿ ಗೂಢವಾಗಿ ಚಲಿಸುವ ಕ್ಯಾಮೆರಾ ನಡೆ, ಹೆಜ್ಜೆಯ ಸಪ್ಪಳವನ್ನೂ, ಬಾಗಿಲ ಹೊರಳಾಟವನ್ನೂ ಭಯದ ಪರಿಣಾಮಕ್ಕೆ ಬಳಸಿಕೊಳ್ಳುವ ಧ್ವನಿ ವಿನ್ಯಾಸ, ಹಿನ್ನೆಲೆ ಸಂಗೀತ ಎಲ್ಲವೂ ಇದರ ಪರಿಣಾಮವನ್ನು ಹೆಚ್ಚಿಸಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3kTrerk ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.